ಶ್ರೀ ಸುಬ್ಬರಾಯಶೆಟ್ಟರು.—ಆ ರೀತಿ ದಾಸ್ತಾನು ಇಲ್ಲದೇ ಜಮೀನಿಲ್ಲದವರಿಗೆ ಆಹಾರ ಧಾನ್ಯಗಳನ್ನು ಕೊಡದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲರುವ ದಾಸ್ತಾನು ಬೇಗ ಮುಗಿದುಹೋಗುತ್ತದೆ ಎಂದು ಗೊತ್ತಾಗಿದೆ

ಶ್ರೀ ಸುಬ್ಬರಾಯಶೆಟ್ಟರು.—ವರ್ಷದಲ್ಲಿ 6 ತಿಂಗಳು ಆ ಡಿಪೋಗಳಲ್ಲಿ ರೇಷನ್ ಕೊಡದೇ ಇರುವುದು ಗೊತ್ತೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ರೀತಿ ಆಗುತ್ತಿದೆ ಎಂದು ತಿಳಿದುಬಂದಿಲ್ಲ.

ಶ್ರೀ ಸುಬ್ಬರಾಯಶೆಟ್ಟರು.—ಹಾಗೆ ಕೊಡದೇ ಇರುವುದರಿಂದ ಹೆಚ್ಚು ಆಹಾರ ಬೆಳೆ ಬೆಳೆಯುವುದಕ್ಕೆ ಕೂಲಿಗಾರರು ಸಿಕ್ಕದೇ ಬಹಳ ಕಷ್ಟಪಡುತ್ತಿರುವುದು ಗೊತ್ತಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಪ್ರಶ್ನೆ ಉದ್ಭವಿಸುವುದಿಲ್ಲ.

Mr. SPEAKER.—Next question. Sri S. Kariappa.

Lift Irrigation schemes in the Arkavathi Valley, Kankanhalli Taluk.

*Q.—12. Sri S. KARIAPPA (Bangalore District—General).—

Will the Government be pleased to state:—

(*a*) whether any Lift Irrigation Schemes in the Arkavathi Valley, Kankanhalli Taluk, are under contemplation;

(*b*) if the answer is in the affirmative, the names and the estimated cost of each of those schemes;

(*c*) the probable charge per acre, according to the present calculations, for obtaining supply of water?

*A.—The Hon'ble Sri T. MARIAPPA (Home Minister).—

(*a*) Yes. Two works have been contempleted.

(*b*) 1. Lift Irrigation in Arkavathy valley near Ganal in Kankanhalli Taluk. Estimated cost Rs. 30,000 for 66 acres.

2. Lift Irrigation in 1/5th mile of Kankanhally--Ramanagaram road near Thamasandra Village. Estimated cost Rs. 21,000 for 50 acres.

(*c*) (i) The cost of supply of water will be (30,000 ÷ 66 acres) = Rs. 455 per acre approximately in the case of the first scheme.

(ii) In the case of the second scheme Rs. 420 is the cost of supplying water.

ಶ್ರೀ ಎಸ್. ಕರಿಯಪ್ಪನವರು.—ಈ ಲಫ್ಟ್ ಇರಿಗೇಷನ್ ಯೋಜನೆ ಮಂಜೂರಾಗಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾವು ಕೇಳಿರತಕ್ಕ ಎಚಾರದಲ್ಲಿ ಎರಡು ಯೋಜನೆಗಳು ಪರಿಶೀಲನೆಯಲ್ಲಿವೆ.

ಶ್ರೀ ಎಸ್. ಕರಿಯಪ್ಪನವರು.—ಅಂದಾಜು ತಯಾರಾಗಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಗಿದೆ. ಒಂದಕ್ಕೆ 30,000 ರೂಪಾಯಿ, ಇನ್ನೊಂದಕ್ಕೆ 21,000 ರೂಪಾಯಿ ಎಂದು ಉತ್ತರದಲ್ಲೇ ತಿಳಿಸಿದೆ.

ಶ್ರೀ ಎಸ್. ಕರಿಯಪ್ಪನವರು.—ಇದಕ್ಕೆ ವಾಟರ್ ರೇಟ್ ಎಷ್ಟಾಗಬಹುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪ್ರಾರಂಭದಲ್ಲಿ ಎಷ್ಟಾಗುತ್ತದೆ ಎಂಬುದನ್ನು ಉತ್ತರದಲ್ಲಿ ತಿಳಿಸಿದೆ. ಆದಲ್ಲದೆ ಪಂಪಿಂಗ್ ಚಾರ್ಜ್ ಕೊಡಬೇಕಾಗುತ್ತದೆ. ಅದು ಮೊದಲನೆಯ ಬಾಬಿಗೆ 62 ರೂಪಾಯಿ, ಎರಡನೆಯ ಬಾಬಿಗೆ 78 ರೂಪಾಯಿವರೆಗೂ ಬೀಳುತ್ತದೆ.

ಶ್ರೀ ಎಸ್. ಕರಿಯಪ್ಪನವರು.—62 ರೂಪಾಯಿ ಕೊಟ್ಟು ವ್ಯವಸಾಯಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಆಲೋಚನೆಮಾಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮಗೆ ಆಗತಕ್ಕ ಖರ್ಚಿನ್ನು ಎಂಬುದನ್ನು ಹೇಳಿದ್ದೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—Capital investment ಪೂರ್ತಿಯಾಗಿ ಸರ್ಕಾರದವರೇ ವಹಿಸುತ್ತಾರೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, ಪೂರ್ತಿಯಾಗಿ ಸರ್ಕಾರದವರೇ ವಹಿಸುತ್ತಾರೆ.

Mr. SPEAKER.—Next question. Sri M. V. Krishnappa.

Transactions in Taluk and Circle Multipurpose Societies in the State

*Q.—34. Sri M. V. KRISHNAPPA (Kolar District-General).—Will the Government be pleased to state:—

(*a*) the total paid-up capital of Taluk and Circle Multi purpose Societies in the State up to the end of June 1950;

(*b*) the total transaction;

(*c*) the turn-over;

(*d*) the net profit up to June 1950?

A.—The Hon'ble Sri T. MARIAPPA (Home Minister).—(*a*) s. 30,81,410.

(*b*) and (*c*) Rs. 7,78,55,120.

(*d*) Rs. 6,60,112.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಮಲ್ಟಿ ಕೋ-ಆಪರೇಟಿವ್ ಸೊಸೈಟಿಗಳ ಪೇಡ್ ಅಪ್ ಕ್ಯಾಪಿಟರ್ 30,81,410 ರೂಪಾಯಿ ಎಂದು ಹೇಳಿದ್ದೀರಿ, ಅದನ್ನು ಬ್ಯಾಂಕ್‌ನಲ್ಲಾಗಲೀ, ಟ್ರೆಜರಿಯಲ್ಲಾಗಲೀ ಡಿಪಾಜಿಟ್ ಮಾಡಿದ್ದೀರಾ ?